ಶ್ರೀ ಆರ್. ಕೆಂಚಪ್ಪ.—(ಸ) ಪ್ರಶ್ನೆಗೆ ಉತ್ತರವಾಗಿ ಇನ್ನೂ 28 ಗ್ರಾಮಗಳಲ್ಲಿ ಭೂಸ್ವಾಧೀನ ಕ್ರಮಗಳನ್ನು ಪೂರ್ಣಗೊಳಿಸಬೇಕಾಗಿದೆ ಎಂದು ಹೇಳಿದ್ದೀರಿ ಮತ್ತು ವೆಂಕಟಾಪುರ ಮತ್ತು ಕನಕಪುರ ಗ್ರಾಮಗಳದ್ದು 63 ನೇ ಇನವಿಯಲ್ಲಿ ಆಪ್ಲಿಕೇಷನ್ ಕೊಟ್ಟಿದ್ದರೂ ಕೂಡ ಇನ್ನೂ ರವಿನ್ಯೂ ಇನ್‌ಸ್ಪೆಕ್ಟರ ಹತ್ತಿರ ರೆಕಾರ್ಡ್ ಮಾಡುವುದು ಪೆಂಡಿಂಗ್ ಇದೆ ಎಂದು ಹೇಳಿದ್ದೀರಿ, ರೆಕಾರ್ಡ್ ಮಾಡುವುದಕ್ಕೆ ಬೇಕಾಗತಕ್ಕ ಕಾಲ ನಿರ್ದಿಷ್ಟವಾದ ಅವಧಿ ಇದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ 28 ರಲ್ಲಿ 3 ಕೇಸಿನಲ್ಲಿ ಫೈನಲ್ ನೋಟಿಫಿಕೇಷನ್ ಆಗಿದೆ, ತಾವು ಕೇಳಿರುವ ವೆಂಕಟಾಪುರದಲ್ಲಿ 12 ನೇ ತಿಂಗಳು 63 ರಲ್ಲಿ ಆಪ್ಲಿಕೇಷನ್ ಬಂದಿದೆ, ರವಿನ್ಯೂ ಇನ್‌ಸ್ಪೆಕ್ಟರು ರೆಕಾರ್ಡ್ ಬಿರ್ಡ್ ಅಪ್ ಮಾಡುತ್ತಾ ಇದ್ದಾರೆ ಎಂದು ಉತ್ತರ ಬಂದಿದೆ.

ಶ್ರೀ ಬಿ ಬೈರಪ್ಪಾಜಿ.—ಪಾವುಗಡ ತಾಲ್ಲೂಕಿನಲ್ಲಿ ಮತ್ತು ಅದೇ ರೀತಿ ತುಮಕೂರು ಜಿಲ್ಲೆಯಲ್ಲಿ ಇನ್ನೂ ಅನೇಕ ಗ್ರಾಮಗಳದ್ದೂ ಕೂಡ ನೂರಾರು ಇಂತಹ ಕೇಸುಗಳು ಹತ್ತಾರು ವರ್ಷಗಳಿಂದ ಇತ್ಯರ್ಥವಾಗದೆ ಹಾಗೆಯೇ ಉಳಿದಿವೆ. ಸರ್ಕಾರವು ಆದಷ್ಟು ಬೇಗ ಹರಿಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುವ ರೀತಿಯಲ್ಲಿ ಈ ಭೂಮಿಗಳನ್ನು ಸ್ವಾಧೀನಪಡಿಸಿ ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ಡೆಪ್ಯೂಟಿಕಮಿಷನರುಗಳಿಗೆಲ್ಲಾ ಬರೆದಿದ್ದೇವೆ. ಮತ್ತು ಡೆಪ್ಯೂಟಿ ಕಮಿಷನರ ಕಾನ್‌ಫರೆನ್ಸ್‌ನಲ್ಲೂ ಕೂಡ ಇದೇ ವಿಷಯವನ್ನು ತೆಗೆದುಕೊಂಡು ಈಗಿರುವ ಅಕ್ಯಿಜಿಷನ್ ಆಕ್ಟ್‌ನ್ನು ಅಮೆಂಡ್ ಮಾಡದೇ ಆದಷ್ಟು ಜಾಗ್ರತೆ ತೀರ್ಮಾನ ಮಾಡಲು ಎಷ್ಟು ಬೇಕೋ ಆಷ್ಟನ್ನೂ ಕೂಡ ಮಾಡಿ ಎಂದು ಹೇಳಿ ಆದೇಶ ಕೊಟ್ಟಿದ್ದೇವೆ.

ಶ್ರೀ ಆರ್. ಕೆಂಚಪ್ಪ.—ಈ ತಾಕರಾರುಗಳನ್ನು ಪರಿಶೀಲನೆ ಮಾಡುವುದು 62ನೇ ಇನವಿಯಿಂದಲೂ ಕೂಡ ಅಸಿಸ್ಟೆಂಟ್ ಕಮಿಷನರ ಆಫೀಸಿನಲ್ಲಿ ಪೆಂಡಿಂಗ್ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಗುಮ್ಮಘಾಟ್ಟ ಗ್ರಾಮದಲ್ಲಿ 62ರಲ್ಲಿ ಹಿಯರಿಂಗ್ ಆಬ್ಜೆಕ್ಷನ್ ಇವೆಲ್ಲಾ ಆಗಿದೆ, ಲೋಕರ್ ಪಂಚಾಯ್ತಿ ರೆಸಲ್ಯೂಷನ್ ಆಗಬೇಕು ಆದಾದಮೇಲೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಹೋಗಿ ಬರಬೇಕು, ಇದರಿಂದ ಸ್ವಲ್ಪ ವಿಳಾನವಾಗಿದೆ.

---

## Agricultural Colonies For Scheduled Castes and Scheduled Tribes at Gantapura, Kyarsinakere and Arikere.

*Q.—222. Sri D.PARAMESHWARAPPA (Honnali).—

Will the Government be pleased to State.—

(a) whether repeated representations have been made by the villagers of Gantapura, Kyarsinakere and Arikere for sanction of agriculture colonies for the Scheduled Castes and Scheduled Tribes ;

(b) if so, the action they have taken in this behalf ?

A.—Smt. YASHODARA DASAPRA (Minister for Social Welfare).—

(a) No representations are received from the villagers of Kyarsinakere and Gantapura for establishing agriculture colonies. A proposal has however been received from the Deputy Commissioner, Shimoga, for establishing agricultural colonies, at Gantapur and Arikere villages.

(b) A sum of Rs. 37,000 is sanctioned for an agricultural colony at Sl. No. 104 Arikere during 1964-65.

Sri D. PARAMESHWARAPPA.—I request that the name of the village may be corrected as "Kyasinakere". It is said that representations have not been received. If I place before the Hon. Minister

(Sri D. Parameswarappa)

the evidence for having sent the representation last year by registered post, will the Minister concede that representations have been received and no action has been taken so far ?

†ಶ್ರೀಮತಿ ಯಶೋಧರಾ ದಾಸಪ್ಪ.—ಡಿ. ಸಿ. ಇಂದ ಯಾವ ಶಿಫಾರಸು ಬಂದಿದೆ ಅದಕ್ಕೆ 32 ಸಾವಿರ ರೂಪಾಯಿ ವಿನಿಯೋಗವಾಗಿದೆ. ಆ ಕಾಲೋನಿಗಳಿಗೆ ಶಿಫಾರಸು ಆಗಿ ಬರಬೇಕಾದರೆ ಅಲ್ಪಾರತಕ್ಕ ಜಮೀನು ಮತ್ತು ಇತರ ಎಲ್ಲಾ ಅನುಕೂಲಗಳನ್ನೂ ಲೋಕಲ್ ಆಫೀಸರ್ಸ್ ನೋಡಿ ಶಿಫಾರಸು ಮಾಡುತ್ತಾರೆ. ಆ ರೀತಿ ಶಿಫಾರಸು ಬಂದಾಗ ಹಣ ನಮ್ಮಲ್ಲಿ ಇದ್ದರೆ ಖಂಡಿತವಾಗಿಯೂ ಆ ಕಾಲೋನಿಗಳನ್ನು ಪ್ರಾರಂಭಮಾಡುತ್ತೇವೆ.

Sri D. PARAMESHWARPPA.—My question is whether representations have not been received by the villagers of Kyasinakere ? I have got copies.

Mr. SPEAKER.—The member may kindly pass them on to the Hon. Minister.

ಶ್ರೀಮತಿ ಯಶೋಧರಾ ದಾಸಪ್ಪ.—ಸ್ವಾಮಿ ಇಂತಹ ರೆಪ್ರಸೆಂಟೇಷನ್‌ಗಳು ಬೇಕಾದಷ್ಟು ಬೇಕಾದ ಕಡೆಯಿಂದ ವಿನಿಸ್ಟ್ರುಗಳಿಗೆ ಬರುತ್ತವೆ. ಅವನ್ನು ಲೋಕಲ್ ಆಫೀಸರ್, ಡಿ. ಸಿ. ಗಳಿಗೆ ಕಳುಹಿಸುತ್ತೇವೆ. ಎಲ್ಲಿ ಜಮೀನು ಇದ್ದರೆ ಜಾಗ, ಜನಸಂಖ್ಯೆ ನೋಡಿಕೊಂಡು ನಮ್ಮಲ್ಲೂ ಕೂಡ ಹಣ ಇದ್ದ ಪಕ್ಷದಲ್ಲಿ ಖಂಡಿತವಾಗಿಯೂ ಅದನ್ನು ಸಾರಾಂಶ ಮಾಡಿಯೇ ಮಾಡುತ್ತೇವೆ.

Sri D. PARAMESHWARAPPA.—I want a specific answer. Whether it is a fact that representation was received last year ?

ಶ್ರೀಮತಿ ಯಶೋಧರಾ ದಾಸಪ್ಪ.—ರೆಪ್ರಸೆಂಟೇಷನ್ ಬಂದಿರಬಹುದು. ಅದನ್ನು ಲೋಕಲ್ ಆಫೀಸರ್‌ಗೆ ಕಳುಹಿಸುತ್ತೇವೆ, ಅವರು ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ರೆಪ್ರಸೆಂಟೇಷನ್‌ಗಳು ಬೇಕಾದಷ್ಟು ಬೇಕಾದ ಕಡೆಯಿಂದ ಬರುತ್ತವೆ ಅವನ್ನು ಡೆಪ್ಯೂಟಿ ಕಮೀಷನರ ಕಡೆಗೆ ಕಳುಹಿಸುತ್ತೇವೆ ಎಂದು ಹೇಳಿದರು. ದೇಶದಲ್ಲಿರ ತಕ್ಕ ಕೆಲವು ಭೂಮಿಗಳನ್ನು ಕಾಲೋನಿ ಮಾಡುತ್ತೇವೆ ಎಂದು ಹೇಳಿ 20-30 ವರ್ಷಗಳಿಂದ ಹಾಗೆಯೇ ಇಟ್ಟುಕೊಂಡು ಅವನ್ನು ವ್ಯವಸಾಯಕ್ಕೂ ಕೊಡದೆ ಕಾಲೋನಿಗಳನ್ನೂ ಕೂಡ ಮಾಡದೇ ರೈತರಿಗೆ ತೊಂದರೆ ಕೊಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಅದಕ್ಕೆ ಏನು ಪರಿಹಾರ ಮಾಡುತ್ತೀರಿ ?

ಶ್ರೀಮತಿ ಯಶೋಧರಾ ದಾಸಪ್ಪ.—ಅದು ನಮ್ಮ ಗಮನಕ್ಕೆ ಬಂದಿಲ್ಲ, ಬಂದರೆ ಅದಕ್ಕೆ ಏನು ಪರಿಹಾರ ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಗೋಪಾಲ ಸಾರನ್ನ.—ಜೀರಾಯಿತ ಕಾಲೋನಿಗಳು ಆಗಬೇಕೆಂದು ಶಿವಮೊಗ್ಗ ಜಿಲ್ಲೆಯಲ್ಲಿ ಮನವಿಗಳು ಬಂದರೂ ಕೂಡ ಅವನ್ನು ಡೆಪ್ಯೂಟಿ ಕಮೀಷನರಿಗೆ ಕಳುಹಿಸುತ್ತೇವೆ ಎಂದು ಹೇಳಿದಿರಿ. ಈ ಒಂದು, ಎರಡು, ಮೂರು ಯೋಜನೆಗಳು ಆಗುವಾಗ ಆ ಜಿಲ್ಲೆಯ ಸೋಷಿಯರ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಏಕೆ ಈ ಪ್ರಪೋಸರ್ಸ್‌ನ್ನು ಕಳುಹಿಸಿಕೊಡಲಿಲ್ಲ ? ಅದು ಕೆಲಸ ಮಾಡುತ್ತಾ ಇತ್ತೋ ಇಲ್ಲವೇ ?

ಶ್ರೀಮತಿ ಯಶೋಧರಾ ದಾಸಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಜನಸಂಖ್ಯೆಗನುಗುಣವಾಗಿ ಬೇಕಾದಷ್ಟು ಕಾಲೋನಿಗಳನ್ನು ಮಾಡಿದ್ದೇವೆ. ಅವಕೆರೆ ಕಾಲೋನಿಯು ಬಂದಿದೆ, ಇನ್ನು ಎರಡರ ವಿಷಯವನ್ನು ಡಿ.ಸಿ. ಅವರಿಗೆ ಕಳುಹಿಸಿದ್ದೇವೆ ಎಲ್ಲಿ ಜಾಗ ಇದೆ, ಜನಸಂಖ್ಯೆಗೆ ಅಗತ್ಯವಾಗಿದೆ ಎಂದು ಹೇಳಿ ಅವರು ಶಿಫಾರಸು ಮಾಡಿಕಳುಹಿಸಿದರೆ ನಮ್ಮಲ್ಲಿ ಹಣ ಇದ್ದಾಗ ಅವನ್ನು ಕೊಡಲಾಗುತ್ತದೆ.

Sri D. PARAMESHWARAPPA.—Does the Hon'ble Minister know the number of families in this Kyasinakere village ?

ಶ್ರೀಮತಿ ಯಶೋಧರಾ ದಾಸಪ್ಪ.—ನಮ್ಮ ಗಮನಕ್ಕೆ ಬಂದಿಲ್ಲ.

Sri D. PARAMESHWARAPPA.—Is there any recommendation by the Deputy Commissioner to release 100 acres of land in favour of the colony so far as Arakere is concerned ?

ಶ್ರೀಮತಿ ಯಶೋಧರಾ ದಾಸಪ್ಪ.—ಅಲ್ಲಿ ಜಮೀನು ಇದ್ದದ್ದರಿಂದಲೇ 37 ಸಾವಿರ ರೂಪಾಯಿ ಅರಿಕೆರೆ ಕಾಲೋನಿಗೆ ಮಂಜೂರು ಆಗಿರುವುದು.

Sri D. PARAMESHWARAPPA.—Did he not ask for further release of 100 acres for the purpose of the colony?

ಶ್ರೀಮತಿ ಯಶೋಧರಾ ದಾಸಪ್ಪ.—ಅದು ಇನ್ನೂ ನಮ್ಮ ಗಮನಕ್ಕೆ ಬಂದಿಲ್ಲ.

---

1-30 P.M.

## Co-operative Societies for the Construction of Houses for Harijans.

*Q.—262. Smt. NAGAMMA (Kalmala).—

Will the Government be pleased to state :—

(*a*) the number of Co-operative Societies registered in the State for the construction of houses for Harijans ;

(*b*) out of them, the number of Societies to which necessary amount has been provided by Government ;

(*c*) the number of Societies that have not yet been provided with the amount ;

(*d*) the total amount prayed for by these Societies ;

(*e*) when they would provide the same ?

*A.*—Sri RAMAKRISHNA HEGDE (Minister for Development, Panchayat Raj and Co-operation).—

(*a*) 238.

(*b*) 65.

(*c*) 173.

(*d*) Rs. 20,00,000.

(*e*) A sum of Rs. 6 lakhs has been provided during the current year and has been fully utilised. Efforts are being made to secure a loan of Rs. one crore from Life Insurance Corporation of India for the purpose. No sooner the loan from L. I. C. is secured than the demand can be fully met.

ಶ್ರೀಮತಿ ನಾಗಮ್ಮ.—(ಬಿ) ಪ್ರಶ್ನೆಗೆ ಉತ್ತರವಾಗಿ 65 ಸಂಘಗಳಿಗೆ ಮೊಬಲಗನ್ನು ಒದಗಿಸಲಾಗಿದೆಯೆಂದು ಹೇಳಿದೆ. ಮೈಸೂರು ಜಿಲ್ಲೆಯಲ್ಲಿ ಯಾವ ಯಾವ ಸಂಘಗಳಿಗೆ ಹಣ ಒದಗಿಸಲಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಒಂದು ದೊಡ್ಡ ಲಿಸ್ಟ್ ಇದೆ, ಬೇಕಾದರೆ ಕೊಡುತ್ತೇನೆ, ಅವರು ನೋಡಿಕೊಳ್ಳಬಹುದು.

ಶ್ರೀ ಸಿ. ಆರ್. ರಂಗೇಗೌಡ.—(ಇ) ಪ್ರಶ್ನೆಗೆ ಉತ್ತರ ಕೊಟ್ಟಿರುವಂತೆ ಕಳೆದ ಸಾಲಿನಲ್ಲೂ ಆರ್ಥಿಕ ಮಂತ್ರಿಗಳು ಉತ್ತರ ಹೇಳಿದ್ದರು. ಆ ಸಂಬಂಧದಲ್ಲಿ ಬೇಗ ಹಣ ಪಡೆಯಲು ಏನು ಪ್ರಯತ್ನ ಮಾಡಲಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಜೀವ ವಿಮಾ ಕಾರ್ಪೊರೇಷನ್ನಿನವರು ಅನೇಕ ಪರತ್ತುಗಳನ್ನು ಹಾಕಿ ವಿವರಣೆ ಕೇಳಿದ್ದರು. ಅದನ್ನೆಲ್ಲಾ ಕೊಡಲಾಗಿದೆ. ಶೀಘ್ರವಾಗಿ ಹಣ ದೊರೆಯಬಹುದೆಂಬ ಆಶೆ ಇದೆ.